ಶ್ರೀ ಎಚ್. ಟಿ. ಪುಟ್ಟಪ್ಪ.—ಈ ರಸ್ತೆಯಲ್ಲಿ ಬಸ್ಸುಗಳು ಮುಂತಾದುವು ಹೆಚ್ಚಾಗಿ ಸಂಚಾರ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಬೈಲನರಸಾಪುರಕ್ಕೆ ಈ ರಸ್ತೆಯಲ್ಲೂ ಒಂದು ಬಸ್ಸು ಓಡಾಡುತ್ತದೆ, ಬೇರೆ ರಸ್ತೆಯಿಂದಲೂ ಬೈಲನರಸಾಪುರಕ್ಕೆ ಬಸ್ಸುಗಳು ಹೋಗುತ್ತವೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಡಿಸ್ಟ್ರಿಕ್ಟ್ ಬೋರ್ಡಿನಿಂದ ಈ ರಸ್ತೆಯನ್ನು ನರಮಾಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಬಾನಮಾಕನ ಹಳ್ಳಿಯಿಂದ ಬೈಲನರಸಾಪುರಕ್ಕೆ ಹೊಗುವ ರಸ್ತೆ ಡಿಸ್ಟ್ರಿಕ್ಟ್ ಬೋರ್ಡಿನ ರಸ್ತೆಯಾದರೂ ಕೂಡ, ಅದನ್ನು ಪಕ್ಕಾ ಮಾಡಿಸಬೇಕಾದರೆ ಬಹಳ ಹಣ ಖರ್ಚಾಗುತ್ತದಾದ್ದರಿಂದ ಅದನ್ನು ತೆಗೆದುಕೊಂಡಿಲ್ಲ.

ಶ್ರೀ ಎಚ್. ಟಿ. ಪುಟ್ಟಪ್ಪ.—ಎಷ್ಟು ಹಣ ಖರ್ಚಾಗುತ್ತದೆ ?

ಶ್ರೀ ಟಿ. ಚನ್ನಯ್ಯ.—ಸುಮಾರು 75,000 ರೂಪಾಯಿಗಳಾಗುತ್ತವೆ.

Bridge across Kodihalla, Kadabakere, Tumkur District.

Q.—514. **Sri T. N. MUDALAGIRI GOWDA** (Kunigal).—

Will the Government be pleased to state :—

(*a*) the year in which the bridge across Kodihalla, Kadabakere in Kadabakalagattammagudi Road in Tumkur District collapsed ;

(*b*) whether the people of that part have represented to the Chief Minister and the Muzrai Minister that this bridge should be got constructed ;

(*c*) the reasons for not sanctioning the estimate of this bridge so far;

(*d*) the amount for which the estimate has been prepared ?

A.—**Sri T. CHANNIAH** (Minister for Public Health and Local Self-Government).—

(*a*) 1949.

(*b*) Yes.

(*c*) An estimate has been furnished by the Public Works Department and it is under consideration.

(*d*) Rs. 73,000.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—Consideration ನಲ್ಲಿದೆಯೆಂದು ಹೇಳಿದ್ದೀರಿ. ಯಾವ stageನಲ್ಲಿ consider ಮಾಡುತ್ತಿದ್ದೀರೆಂದು ಹೇಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಸೇತುವೆ ಕಟ್ಟಿಸಬೇಕೆಂದು ಹೇಳಿ ಒಂದು ಎಸ್ಟಿಮೇಟನ್ನು ಕಳುಹಿಸಿದ್ದಾರೆ. ಈಗ ಆ ಸೇತುವೆಯನ್ನು ಕಟ್ಟಿಸಬೇಕೇ ಬೇಡವೇ ಎಂಬುದನ್ನು ಸರ್ಕಾರದವರು ಪರಿಶೀಲಿಸುತ್ತಿದ್ದಾರೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಎಸ್ಟಿಮೇಟನ್ನು ಯಾವಾಗ ಕಳುಹಿಸಿದರು ?

ಶ್ರೀ ಟಿ. ಚನ್ನಯ್ಯ.—ಬಹುಶಃ ಜನವರಿ ತಿಂಗಳಿನಲ್ಲಿ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಇದರ ಅವಶ್ಯಕತೆಯನ್ನು ತಾವು ಪರಿಶೀಲನೆ ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಇದರ ವಿಚಾರದಲ್ಲಿ ಇನ್ನೂ final decision ತೆಗೆದುಕೊಂಡಿಲ್ಲ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಅವಶ್ಯಕತೆಯೇ ನೆಂಬುದನ್ನು ಪರಿಶೀಲನೆಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—6 ವರ್ಷಗಳಿಂದ ಈ ಸೇತುವೆ ಬಿದ್ದು ಹೋಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಬಂದಿದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಹಾಗಾದರೆ, ಇಷ್ಟು ದಿವಸ ನಿಧಾನ ಮಾಡಿರುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಈಗ ಸುಮಾರು ಒಂದು ವರ್ಷದಿಂದೀಚೆಗೆ ಎರಡು ವಿಧದ ಅಂದಾಜುಗಳು ತಯಾರುಮಾಡಲ್ಪಟ್ಟಿವೆ. ಒಂದು 15,000 ರೂಪಾಯಿಗಳ ಎಸ್ಟಿಮೇಟು, ಇನ್ನೊಂದು 73,000 ರೂಪಾಯಿಗಳ ಎಸ್ಟಿಮೇಟು. ಸೇತುವೆಯನ್ನು ಕಟ್ಟಿಸುವುದು ಸೂಕ್ತವೇ, ಅಥವಾ high level causeway ಕಟ್ಟಿಸುವುದು ಸೂಕ್ತವೆ. ಎಂಬ ಪ್ರಶ್ನೆ ಉದ್ಭವಿಸಿ ಕಡೆಗೆ ಸೇತುವೆಯನ್ನು ಕಟ್ಟಿಸಬೇಕೆಂದು P.W.D. ಇಲಾಖೆಯವರು ತೀರ್ಮಾನಿಸಿ ಇಂಜಿನಿಯರು ಸರ್ಕಾರಕ್ಕೆ ವರದಿ ಕಳುಹಿಸಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಈ ಸೇತುವೆ ಬಿದ್ದುಹೋಗಿರುವುದರಿಂದ ರೈತರಿಗೆ ಕಾಳು, ಫಸಲು, ಗೊಬ್ಬರ ಮುಂತಾದುವುಗಳನ್ನು ಸಾಗಿಸುವುದಕ್ಕೆ ತೊಂದರೆಯಾಗಿ, ಎಷ್ಟು ಸಾವಿರ ರೂಪಾಯಿಗಳ ನಷ್ಟವಾಗಿದೆಯೆಂಬುದನ್ನು ನೋಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ರೈತರಿಗೆ ಕಷ್ಟವಾಗಿದೆಯೆಂಬುದನ್ನು ಸರ್ಕಾರದವರು ಮನಗಂಡಿದ್ದಾರೆ. ಎಷ್ಟರಮಟ್ಟಿನ ಕಷ್ಟನಷ್ಟವಾಗಿದೆಯೆಂಬುದು ಗೊತ್ತಿಲ್ಲ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಈ ಸೇತುವೆ ಅಷ್ಟು ಪ್ರಾಮುಖ್ಯವಲ್ಲವೆಂದು ನಿರ್ಧಾರ ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಪ್ರಾಮುಖ್ಯತೆಯೊಂದೇ ಅಲ್ಲ ; ಹಣದ ಅಭಾವದಿಂದ ನಿಧಾನವಾಗುತ್ತಿದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಹಾಗಾದರೆ ತಮಗೆ ಈ ಹಣದ ಅಭಾವ ಇರುವುದರಿಂದ ತಾವು ಇಲ್ಲಿಯವರೆಗೂ ಯಾವ ಕೆಲಸವನ್ನೂ ಕೂಡ ನಡಸಿಯೇ ಇಲ್ಲವೇ ?

ಶ್ರೀ ಟಿ. ಚನ್ನಯ್ಯ.—ಎಲ್ಲೆಲ್ಲಿ ಅತಿ ಆವಶ್ಯಕವಾದ ಕೆಲಸವೆಂದು ಕಂಡು ಬರುತ್ತದೆಯೋ ಅಂಥ ಸಂದರ್ಭಗಳಲ್ಲಿ ಮಾತ್ರ ಹಣವನ್ನು ಖರ್ಚು ಮಾಡಲಾಗಿದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ತಾವು ಈಗೇನು ಅಪ್ಪಣೆಕೊಡಿಸೋಣವಾಯಿತೋ—ಬಹಳ ಪ್ರಾಮುಖ್ಯವಾದಂಥ ಕೆಲಸಗಳಿಗೆ ಮಾತ್ರ ಹಣ ಖರ್ಚುಮಾಡಲಾಗುತ್ತಿದೆ ಎಂದು—ಅಂಥ ಪ್ರಾಮುಖ್ಯವಾದ ಕೆಲಸಗಳ ಪೈಕಿ ಇದು ತೀರ ಆವಶ್ಯಕವಾದ ದ್ದೆಂಬುದನ್ನು ಸರ್ಕಾರದವರು ಮನಗಂಡಿದ್ದಾರೆಯೇ?

ಶ್ರೀ ಟಿ. ಚನ್ನಯ್ಯ.—ಆದಷ್ಟು ಬೇಗ ಅದನ್ನು ತೀರ್ಮಾನ ಮಾಡುತ್ತೇವೆ.

ಶ್ರೀ ಟಿ. ಎ. ಮೂಡಲಗಿರಿಗೌಡ.—ಸ್ವಾಮಿ, ಇದನ್ನು ಇನ್ನು ಎಷ್ಟು ದಿವಸಗಳಲ್ಲಿ ಕಳುಹಿಸಿಕೊಡಲು ಏರ್ಪಾಡು ಮಾಡುತ್ತೀರಿ ?

ಶ್ರೀ ಟಿ. ಚನ್ನಯ್ಯ.—ಆದಷ್ಟು ಜಾಗ್ರತೆ.

ಶ್ರೀ ಟಿ. ಎ. ಮೂಡಲಗಿರಿಗೌಡ.—ನಾನು ಕೇಳಿದ್ದು ಈ ಅಂದಾಜನ್ನು ಸರ್ಕಾರದವರು ಬೇಗ ಮಂಜೂರು ಮಾಡುತ್ತೀರಾ ಎಂದು ?

ಶ್ರೀ ಟಿ. ಚನ್ನಯ್ಯ.—ಆ ಬಗ್ಗೆ ಸೂಕ್ತ ಕಾರ್ಯ ಕ್ರಮಗಳನ್ನು ಜರೂರಾಗಿ ಕೈಗೊಳ್ಳಲಾಗುವುದು.

ಶ್ರೀ ಎ. ಹುಚ್ಚಮಾಸ್ತಿಗೌಡ.—ಇನ್ನು ಒಂದೆ ರಡು ತಿಂಗಳೊಳಗಾಗಿ ಆದರೂ ಈ ಕೆಲಸವನ್ನು ಮುಗಿಸಲು ಸರ್ಕಾರದವರಿಗೆ ಸಾಧ್ಯವಾಗುತ್ತದೆಯೇ ?

ಶ್ರೀ ಟಿ. ಚನ್ನಯ್ಯ.—ಆಗುತ್ತದೆ.

ಶ್ರೀ ಎ. ಹುಚ್ಚಮಾಸ್ತಿಗೌಡ.—ಸಂಚರಣೆಯ ಕಾಲದಲ್ಲಿ ಅಲ್ಲಿಗೆ ಮಾನ್ಯ ಮುಖ್ಯ ಮಂತ್ರಿಗಳೂ ಮತ್ತು ರೆವಿನ್ಯೂ ಮಂತ್ರಿಗಳೂ ಸ್ಥಳಕ್ಕೆ ದಯಮಾಡಿಸಿದ್ದಂಥ ಕಾಲದಲ್ಲಿ ಜನರು ಪ್ರಾರ್ಥಿಸಿಕೊಂಡಿದ್ದರ ಮೇಲೆ ಈ ಉಭಯ ಸಚಿವರುಗಳೂ ಸರ್ಕಾರದವರು ಆ ಕೆಲಸದ ಬಗ್ಗೆ ತಮ್ಮ ಸಹಾನುಭೂತಿ ಇದೆಯೆಂದೂ—ಆ ಕೆಲಸವನ್ನು ಸರ್ಕಾರದಿಂದಲೇ ಮಾಡಿಸಿಕೊಡುವುದಾ ಗಿಯೂ ಅವರು ಕೊಟ್ಟಂಥ ಭರವಸೆಗಳು ಇಲಾಖೆಯ ಮುಖ್ಯಾಧಿಕಾರಿಗಳಾದ ಚೀಫ್ ಇಂಜಿನಿಯರ್ ಅವರ ಗಮನಕ್ಕೆ ಹೋಗುವುದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಗಮನಕ್ಕೆ ಬರುತ್ತದೆ.

ಶ್ರೀ ಎ. ಹುಚ್ಚಮಾಸ್ತಿಗೌಡ.—ಹಾಗಾದರೆ ಅದರ ಬಗ್ಗೆ ಅವರೇನೂ ಸರ್ಕಾರಕ್ಕೆ ಶಿಫಾರ್ಸನ್ನು ಮಾಡಿಲ್ಲವೇ ?

Sri Kadidal MANJAPPA.—With your permission, I want to say this. Some of these roads are either District Board roads or Village Panchayat roads.

Mr. SPEAKER.—This is a District Board road.

Sri Kadidal MANJAPPA.—The District Board authorities have to find money for this purpose. That is the difficulty.

ಶ್ರೀ ಎ. ಹುಚ್ಚಮಾಸ್ತಿಗೌಡ.—ಮಾನ್ಯ ರೆವಿನ್ಯೂ ಮಂತ್ರಿಗಳವರು ಆ ಕೆರೆಯ ಹಿಂದಿನ ಅಚ್ಚುಕಟ್ಟು ಸರ್ಕಾರದವರಿಗೆ ಸೇರಿರುವುದರಿಂದ ಆ ಕೆಲಸವನ್ನು ಸರ್ಕಾರದಿಂದ ನಾನೇ ಮಾಡಿಸಿಕೊಡುತ್ತೇನೆಂದು ಹೇಳಿರಲಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಆದಷ್ಟು ಸಹಾನು ಭೂತಿಯಿಂದ ಪರಿಶೀಲನೆಮಾಡುತ್ತೇನೆಂದು ಮಾತ್ರ ಹೇಳಿದ್ದೆ. There is one difficulty. The amount cannot be spent out of the allotment intended for '50 Civil Works'.

ಶ್ರೀ ಬಿ. ಹುಚ್ಚೇಗೌಡ.—ಹೀಗೆ ಒಂದು ಸೇತು ವೆಯ ಕೆಲಸಕ್ಕಾಗಿ 75 ಸಾವಿರ ಒಂದು ಲಕ್ಷ ಹಣ ಖರ್ಚು ಆಗುತ್ತದೆಂದು ಹೇಳುವಾಗ ಅದನ್ನು ಮಾಡಿ ಸಲು ಜಿಲ್ಲಾ ಬೋರ್ಡುಗಳಿಗೆ ಸಾಧ್ಯವಾಗುತ್ತದೆಯೇ ?

Mr. SPEAKER.—That is a matter of opinion But within the provisions of the Account Code or within the provisions of the rules of the District Board and the Government which authority should take up the road is the question.

ಶ್ರೀ ಬಿ. ಹುಚ್ಚೇಗೌಡ.—ಈಗ ಸರ್ಕಾರದವರು ತಾವು ಈ ರಸ್ತೆಯನ್ನು ಮಾಡಿಸುತ್ತೇವೆಂದು ಹೇಳಿ ಅದರ ಬಗ್ಗೆ ಅಂದಾಜನ್ನು ತರಿಸಿಕೊಂಡಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ತರಿಸಿಕೊಂಡಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಈ ಕೆಲಸವನ್ನು ಸರ್ಕಾರ ತಾನೇ ಮಾಡಬೇಕಾಗಿರುವುದು ?

ಶ್ರೀ ಟಿ. ಚನ್ನಯ್ಯ.—ಇಲ್ಲ. ಈ ಕೆಲಸವನ್ನು ಜಿಲ್ಲಾ ಬೋರ್ಡಿನವರೂ ಮಾಡಬೇಕಾದದ್ದು. ಜಿಲ್ಲಾ ಬೋರ್ಡಿನವರು ತಮ್ಮ ಭಾಗದ ಖರ್ಚನ್ನು ವಹಿಸಿ ಕೊಳ್ಳಲು ಮುಂದೆ ಬರುವುದಾದರೆ ಅನಂತರ ಸರ್ಕಾರ ದವರು ಆಲೋಚನೆ ಮಾಡಬಹುದು.

ಶ್ರೀ ಸೋಲೂರು ಸಿದ್ದಪ್ಪ.—ಇಂಥ ಕೆಲಸಗಳಿ ಗೆಲ್ಲಾ ಮೊದಲು ಬಜೆಟ್ಟಿನಲ್ಲಿ ಹಣ ಒದಗಿಸಿತಾನೆ ಅನಂತರ ಈ ಕೆಲಸವನ್ನು ಪ್ರಾರಂಭ ಮಾಡುವುದು ?

Mr. SPEAKER.—It concerns only to a particular bridge.

ಶ್ರೀ ಡಿ. ದೇವರಾಜ ಅರಸ್.—ಅದು ಸರಿ. ನನ್ನ ಪ್ರಶ್ನೆ ಸಹಾನುಭೂತಿಯಿಂದ ಪರಿಶೀಲನೆ ಮಾಡಲಾಗು ತ್ತದೆ ಎಂದು ಹೇಳಿದ್ದಾರೆ. ಆದರೆ ಆ ಸಹಾನುಭೂತಿ ಇಲ್ಲದ ಕಡೆ ಯಾವ ಕೆಲಸವೂ ಆಗುವುದಿಲ್ಲವೆಂಬುದು ಅವರ ಅರ್ಥವೋ ?

ಶ್ರೀ ಟಿ. ಚನ್ನಯ್ಯ.—ಆ ಸಹಾನುಭೂತಿ ಎಲ್ಲಾ ಕಡೆಗೂ ಇರುತ್ತದೆ.

President, Arasikere Municipality (Misappropriation of amounts by).

Q.—648. Sri K. PANCHAKSHARIAH (Arasikere).—

Will the Government be pleased to state :—

(*a*) whether any complaint has been made that the President of the Municipality of Arasikere has taken bribes or that he has misappropriated the funds of the Municipality ;

(*b*) whether enquiries have been made in this behalf ;

(*c*) whether it has come to their notice that the abovesaid President has acted contrary to the Government Orders and provision of the Act ?

A.—Sri T. CHANNIAH (Minister for Public Health and Local Self-Government).—

(*a*) Yes, complaints of irregular practices have been received.

(*b*) Yes.

(*c*) The matter is under investigation.